# ಕೆ.ಎಸ್.ನ. ಅವರ 'ಮೈಸೂರ ಮಲ್ಲಿಗೆ' ಕವನಗಳ ಸ್ಥೂಲ ನೋಟ

**ಎಂ.ಮಹಾದೇವಪ್ರಭು**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸ.ಪ್ರ.ದ ಕಾಲೇಜು, ತಲಕಾಡು
ಟಿ.ನರಸೀಪುರ ತಾಲೂಕು, ಮೈಸೂರು ಜಿಲ

**OPEN ACCESS**

Volume: 12

Special Issue: 1

Month: October

Year: 2024

E-ISSN: 2582-0397

P-ISSN: 2321-788X

Impact Factor: 3.025

Citation:
**ಎಂ.ಮಹಾದೇವಪ್ರಭು "ಕೆ. ಎಸ್.ನ. ಅವರ 'ಮೈಸೂರ ಮಲ್ಲಿಗೆ' ಕವನಗಳ ಸ್ಥೂಲ ನೋಟ** ." *Shanlax International Journal of Arts, Science and Humanities,* vol. 12, no. S1, 2024, pp. 173–78.

DOI:
https://doi.org/10.34293/sijash.v12iS1-i2-Oct.8436

**Abstract**

ಕನ್ನಡ ಸಾಹಿತ್ಯ ವಿಸ್ತಾರವಾದುದು. ಪಂಪನಿಂದ ಕುವೆಂಪುವರೆಗೂ ಹಲವು ಕವಿಗಳು ಹಲವು ಭಾವ ಬೆಳೆಗಳನ್ನು ತಮ್ಮ ಕಾವ್ಯ ವ್ಯವಸಾಯದಲ್ಲಿ ಬೆಳೆದಿದ್ದಾರೆ. ಅವರಲ್ಲಿ ಕೆ.ಎಸ್.ನ ಅವರು ಪ್ರೇಮಕವಿಗಳೆಂದೇ ಪ್ರಸಿದ್ಧರಾಗಿದ್ದಾರೆ. ಅವರ ಮೈಸೂರು ಮಲ್ಲಿಗೆ ಪ್ರೇಮದ ಕಂಪನ್ನು ಅಂದಿನಿಂದ ಇಂದಿನವರೆಗೂ ಉಣಬಡಿಸುತ್ತಿದೆ. ಮೈಸೂರು ಮಲ್ಲಿಗೆಯ ಕವನಗಳನ್ನು ಸ್ಥೂಲವಾಗಿ ಪರಿಚಯಿಸುವುದು, ವಿಶ್ಲೇಷಿಸುವುದು ಪ್ರಸ್ತುತ ವರ್ತಮಾನದಲ್ಲಿಟ್ಟು ಗಮನಿಸುವುದು ಈ ಲೇಖನದ ಆಶಯವಾಗಿದೆ. ಸಮಗ್ರ ಕವನಗಳನ್ನು ವಿಷಯಾನುಗುಣವಾಗಿ ಗ್ರಹಿಸುವ ಪ್ರಯತ್ನವಾಗಿದೆ.

**Keynotes**: ಕೆ.ಎಸ್.ನ, ಮೈಸೂರು ಮಲ್ಲಿಗೆ, ಪ್ರೇಮ ಕವನಗಳು, ದಾಂಪತ್ಯ, ಪುತ್ರಪ್ರೇಮ ವರ್ತಮಾನದ ಭಾವನೆಗಳು.

ಮನುಷ್ಯನ ಬದುಕಿನಲ್ಲಿ ಪ್ರೇಮವೆಂಬುದು ಮಧುರ ಭಾವನೆಯಾಗಿದೆ. ಅದಿಲ್ಲದೆ ಬದುಕು ಅಪೂರ್ಣವೆನಿಸುತ್ತದೆ. ಪ್ರೇಮಕ್ಕೆ ನಾನಾ ಮುಖಗಳಿದ್ದು ಅನೇಕ ಕವಿಗಳು ತಮ್ಮ ಕಾವ್ಯಕೃತಿಗಳಲ್ಲಿ ಪ್ರೇಮವನ್ನು ಚಿತ್ರಿಸಿದ್ದಾರೆ. ಪಂಪನಿಂದ ಕುವೆಂಪುವರೆಗೂ ಅನೇಕ ಕವಿಗಳು ಪ್ರೇಮ ಭಾವನೆಯನ್ನು ತಿಳಿಸಿದ್ದಾರೆ ಅದರಲ್ಲಿಯೂ ತೀ.ನಂ.ಶ್ರೀ ಅವರ ಒಲುಮೆ ಆಧುನಿಕ ಕನ್ನಡದಲ್ಲಿ ಪ್ರಕಟವಾದ ಮೊದಲ ಪ್ರೇಮಕವನ ಸಂಕಲನವೆಂದು ಪ್ರಸಿದ್ಧಿ ಪಡೆದಿದೆ. ಅಂತೆಯೇ 'ಮೈಸೂರು ಮಲ್ಲಿಗೆ'ಯ ಸಂಕಲನದ ಕವಿತೆಗಳ ಮೂಲಕ 'ಮಲ್ಲಿಗೆ'ಯ ಕವಿ, ಪ್ರೇಮಕವಿಯೆಂದೇ ಖ್ಯಾತಿ ಪಡೆದವರು ಕೆ.ಎಸ್. ನರಸಿಂಹಸ್ವಾಮಿಯವರು. ಐರಾವತ, ಇರುವಂತಿಗೆ, ತೆರೆದ ಬಾಗಿಲು ಮುಂತಾದ ಅನೇಕ ಸಂಕಲನಗಳ ಮೂಲಕ ಕಾವ್ಯಪ್ರತಿಭೆಯನ್ನು ಕನ್ನಡ ಜನತೆಗೆ ತೋರಿರುವ ಕೆ.ಎಸ್.ನ ಅವರ ಸಮಗ್ರ ಕವನಗಳು ಮಲ್ಲಿಗೆಯ ಮಾಲೆ ಹೆಸರಿನಲ್ಲಿ ಪ್ರಕಟಗೊಂಡಿದೆ.

ಕೆ.ಎಸ್.ನ. ಅವರ ಮೈಸೂರುಮಲ್ಲಿಗೆ 1942 ರಲ್ಲಿ ಪ್ರಕಟವಾಯಿತು (ಮೈಸೂರು ಮಲ್ಲಿಗೆ–ಮುನ್ನುಡಿ, ಪ್ರಕಾಶಕರ ಮಾತು). ಮದುವೆಯಾದ ಮೇಲೆ ಐದಾರು ವರ್ಷಗಳಲ್ಲಿ ರಚಿಸಿದ ಕವನಗಳು ಇದರಲ್ಲಿ ಸಂಕಲಿತವಾಗಿವೆ. ಅದು ಪ್ರಯೋಗಗಳ ಕಾಲವಾಗಿದ್ದು ಗಂಡು–ಹೆಣ್ಣಿನ ಒಲವು ಪ್ರಧಾನವಾಗಿ ಇಲ್ಲಿ ನಿರೂಪಿತವಾಗಿದೆ. (ಹೊಸಗನ್ನಡ ಸಾಹಿತ್ಯ ಚರಿತ್ರೆ–ಪು.92) ಆದ ಕಾರಣ ವಿವಾಹ ಪೂರ್ವ ಪ್ರೇಮವಾಗಲೀ ಅಥವಾ ಪ್ರೇಮ ವಿವಾಹದಂತಹ ವಿಷಯಗಳೇನೂ ಇಲ್ಲಿ ಪ್ರಸ್ತಾಪಿತವಾಗಿಲ್ಲ. ಈ ರಚನೆಗಳೆಲ್ಲ ವಿವಾಹಾನಂತರದ ದಾಂಪತ್ಯ ಪ್ರೇಮದ ಕವಿತೆಗಳಾಗಿವೆ. ಗಂಡು–ಹೆಣ್ಣಿನ ಮಧುರ ಸಂಬಂಧ, ಹೆಣ್ಣು ಮತ್ತು ತೌರಿನ ವಿಷಯ, ಮದುವೆ, ಮನೆ, ಮಕ್ಕಳು ಇವೇ ಈ ಮುಂತಾದ ವಿಚಾರಗಳೇ ಇಲ್ಲಿಯ ಕವನಗಳ ವಸ್ತು. ಈ ಎಲ್ಲ ಕೌಟುಂಬಿಕ ಮಧುರ ಭಾವಗಳು ವ್ಯಾಪಾರೀಕರಣವಾಗುತ್ತಿರುವ, ಮದುವೆ ವಿಚ್ಛೇದನಗಳಲ್ಲಿ ಅಂತ್ಯವಾಗುತ್ತಿರುವ ಈ ವರ್ತಮಾನದಲ್ಲಿ, ಆಧುನಿಕ ಮಾನವ ಸಮಾಜಕ್ಕೆ ಇಲ್ಲಿಯ ಕವನಗಳು ಅಧ್ಯಯನ ಯೋಗ್ಯವೆನಿಸುತ್ತವೆ.

ಮೈಸೂರು ಮಲ್ಲಿಗೆ ಕವನ ಸಂಕಲನದಲ್ಲಿ 49 ಕವನಗಳಿವೆ. 'ಮೈಸೂರು ಮಲ್ಲಿಗೆ'ಸಂಕಲನದ ಪ್ರಕಟಣೆಯಲ್ಲಿ ಕವನಗಳ ಆಯ್ಕೆಯಿಂದ ಹಿಡಿದು ಪುಸ್ತಕ ರೂಪದಲ್ಲಿ ಪ್ರಕಟಿಸುವವರೆಗೆ ತೀ.ನಂ.ಶ್ರೀಯವರ ಪ್ರಭಾವ ಮತ್ತು ಪಾತ್ರವಿರುವುದರ ಬಗ್ಗೆ ಕವಿಯೇ ಹೇಳಿಕೊಂಡಿದ್ದಾರೆ. (ಮುನ್ನುಡಿ). ಛಂದಸ್ಸು ಅಲಂಕಾರ ಇವುಗಳ ಪ್ರಜ್ಞಾಪೂರ್ವಕ ಪರಿವೆಯಿಲ್ಲದೆ ಸಹಜವಾಗಿ ಬರೆದ ಕವಿತೆಗಳು ಇವು. ಈ ಎಲ್ಲ ಕವನಗಳ ವಸ್ತು ದಾಂಪತ್ಯ ಪ್ರೇಮ. ಮದುವೆಯಾದ ಸಂದರ್ಭದ ಹೊಸದರ ರಮ್ಯ ಪ್ರಪಂಚವೊಂದು ಇವುಗಳಲ್ಲಿ ತೆರೆದುಕೊಳ್ಳುತ್ತದೆ. ಹೀಗಾಗಿ ವಸ್ತು

ಬಹುತೇಕ ಏಕಮುಖ; ವಿವಾಹಪೂರ್ವ ಪ್ರೇಮ ವಿಚಾರಗಳು ಬಂದರೂ, ಅದು ವಿವಾಹದ ಸಿದ್ಧತೆಯ ಹಿನ್ನೆಲೆಯಲ್ಲಿ ಬಂದಿವೆ. ಆದುದರಿಂದ ಇಲ್ಲಿಯ ಕವನಗಳನ್ನು ವಿವಾಹ ಪೂರ್ವ ಪ್ರೇಮ, ವಿವಾಹಾನಂತರದ ದಾಂಪತ್ಯಪ್ರೇಮ, ಶೌರ ಪ್ರೇಮ, ವಿರಹ, ಪುತ್ರ ಪ್ರೇಮ, ಮತ್ತಿತರ ವಿಚಾರಗಳಲ್ಲಿ ಅಧ್ಯಯನಕ್ಕೆ ಒಳಗು ಮಾಡಬಹುದು

**ವಿವಾಹ ಪೂರ್ವ ಪೇಮ**

ಕೆ.ಎಸ್ ನ ಅವರ ವಿವಾಹವಾದುದು 1936 ರಲ್ಲಿ ಅದಕ್ಕೂ ಪೂರ್ವದಲ್ಲಿ ಅವರೊಳಗಿನ ಪ್ರೇಮದ ನವಿರು ಭಾವಗಳನ್ನು ಇಲ್ಲಿ ಗಮನಿಸಬಹುದಾಗಿದೆ. ಕೆಲವು ಕವನಗಳು ಸಂಕಲನ ಬರುವ ಮುಣಚೆಯೇ ಪ್ರಬುದ್ಧಕರ್ನಾಟಕ, ಜಯಕರ್ನಾಟಕ ಮುಂತಾದ ಪತ್ರಿಕೆಗಳಲ್ಲ ಅದಾಗಲೇ ಪ್ರಕಟಗೊಂಡಿರುವುದನ್ನು ಕವಿಯೇ ಅರಿಕೆಯಲ್ಲಿ ಹೇಳಿಕೊಂಡಿದ್ದಾರೆ. ಪ್ರೇಮಾಗಮನ, ಹಳ್ಳಿಯ ಚೆಲುವಿಗೆ, ಪ್ರೇಮದ ಗುಲಾಬಿ, ಶಾನುಭೋಗರ ಮಗಳು, ಸ್ವಪ್ನ ಸುಂದರಿ, ಎಚ್ಚರಿಕೆ, ಸಂಗ ಬಿಡುವಾಗ, ಕಂಬನಿ, ಹೂವಿನ ಚೆಂದಮ್ಮ, ಬೆಟ್ಟದ ಗೌರಿ, ನಿನ್ನ ಹೆಸರು– ಈ ಮುಂತಾದುವು ವಿವಾಹ ಪೂರ್ವ ಪ್ರೇಮ ವಿಚಾರಗಳನ್ನು ತಿಳಿಸುವ ಕವನಗಳಾಗಿವೆ. ಈ ಕವನಗಳಲ್ಲಿ ಕೆಲವನ್ನು ಗಮನಿಸಬಹುದು.

**ಪ್ರೇಮಾಗಮನ**

ಕೆ.ಎಸ್.ನ. ಅವರು ವಿವಾಹ ಪೂರ್ವದಲ್ಲಿ ಪ್ರೇಮವು ಹುಟ್ಟುವ ಬಗೆಯನ್ನು ಮನಮೋಹಕವಾಗಿ ಈ ಕವನದಲ್ಲಿ ಕಟ್ಟಿಕೊಟ್ಟಿದ್ದಾರೆ.

ಬದುಕ ಬಳ್ಳಿಯು ದಿವ್ಯ ಲೀಲೆಯ ಹಿಮಂತದಲಿ
ಹೂವ ಹೆತ್ತವಳಲ್ಲ ತಾನು ಎಂದು,
ಬೇಸರದ ಹಸುರುಟ್ಟು ಕೊರಗುತಿರೆ, ಹೂಬನದಿ
ನೂರು ಬಣ್ಣದ ಚಿಟ್ಟೆ ಮೆಲೆ ಬಂದು.

ಚಿಟ್ಟೆಗಳೇ ಹೂವಾಗುವ ಬಗೆ ಇಲ್ಲಿ ಆಪ್ಯಾಯಮಾನವಾಗಿದೆ. ಬದುಕನ್ನು ಬಳ್ಳಿಗೆ ಹೋಲಿಸಿದ್ದಾರೆ. ಬೇಸರದ ಬದುಕಿನಲ್ಲಿ ಯಾರಿಗೂ ತಿಳಿಯದಂತೆಯೇ ಗಂಭೀರವಾಗಿ ಮೌನದಲ್ಲೇ ಆವರಿಸುವುದು ಈ ಪ್ರೇಮ. ಬದುಕಿನ ಕೊರಗನ್ನು ಈ ಪ್ರೇಮ ನಿವಾರಿಸುತ್ತದೆ ಎಂಬುದು ಕವಿಯ ಭಾವವಾಗಿದೆ. ಪ್ರೇಮವು ಹೇಗೆ ತನ್ನ ಅಸ್ತಿತ್ವದಿಂದ ಎಲ್ಲರಿಗೂ ಒಲುಮೆಯುಣಿಸುವ ಮೂಲಕ ಬಡತನವನ್ನು, ಬದುಕಿನ ಜಂಜಾಟವನ್ನು ಕೊನೆಗಾಣಿಸುತ್ತದೆ ಎಂದು ತಿಳಿಸಿದ್ದಾರೆ. ಪ್ರೇಮ ಒಂದು ಕನಸಿನ ಹಾಗೇ ಅದು ಯಾರಿಗೂ ತಿಳಿಯದಂತೆ ಮನದ ಒಳಗಡೆ ಬಂದು ನೆಲೆಸುತ್ತದೆ. ಎಂಬುದು ಕವಿಯ ಮಾತಾಗಿದೆ.(ಪ್ರೇಮಾಗಮನ–ಪು 15)

**ಹಳ್ಳಿಯ ಚೆಲುವೆಗೆ**

ವಿವಾಹಪೂರ್ವದಲ್ಲಿ ಹೆಣ್ಣನ್ನು ಗಂಡು ವರ್ಣಿಸುವ ಬಗೆ ಇಲ್ಲಿದೆ. ಕವಿ ಇಲ್ಲಿ ನವಿಲೂರು ಹೆಣ್ಣನ್ನು ಚೆಲುವೆಯೆಂದು, ಮೊಗದ ಸೌಂದರ್ಯ–ದೈಹಿಕ ಚೆಲುವನ್ನು ಕಾಣುತ್ತಾ "ತೆಳ್ಳಗೆ, ಬೆಳ್ಳಗೆ, ಬೇಟೆಗಾರನ ಬಿಲ್ಲಿನಂತೆ ಹುಬ್ಬು ಕಪ್ಪಾಗಿದೆ, ನಿನ್ನ ಕಣ್ಣು ಪಾರಿವಾಳದ ಕಣ್ಣಿಗೆ ನೆರಳಂತಿದೆಯೆಂದು ವರ್ಣಿಸಿದ್ದಾರೆ.

ರೇಷ್ಮೆಯ ಸೀರೆಗಿಂತ ನಿನ್ನ ದೇಹ ನಾಜೂಕಾಗಿದೆ, ನಿನ್ನ ನುಡಿಯು ಅರಗಿಳಿಗಿಂತ ಇಂಪಾಗಿದೆ. ಹರೆಯದ ಹುಡುಗಿ ನೀನು ನನ್ನನ್ನು ನಂಬಿ ಮದುವೆಯಾಗು, ಸಂತೋಷದಿಂದ ಬಾಳುವೆ ನೀನು" ಎಂದು ಹೆಣ್ಣನ್ನು ವರ್ಣಿಸುತ್ತಾರೆ. ರೈತನಾಗಿ ಕೆಸರುಗದ್ದೆಯಲ್ಲಿ ಹಗಲೆಲ್ಲ ದುಡಿದು ಶ್ರಮಿಸುತ್ತೇನೆ. ವರ್ಷದ ಕೊನೆಯಲ್ಲಿ ಬರುವ ಬೆಳೆ ಹೆಚ್ಚಿದಾಗ ನಿನಗೆ ಹೊಟ್ಟೆ ತುಂಬ ಅನ್ನ, ನೊರೆಹಾಲು ಕೊಡುವೆನು ನನ್ನ ಮಾತನ್ನು ಕೇಳಿ ನನ್ನನ್ನು ಮದುವೆಯಾಗು. ನಿನ್ನ ಆಸೆಯಂತೆ ಆಕಾಶದ ತುಂಬೆಲ್ಲ ನಕ್ಷತ್ರಗಳು ಹರಡಿವೆ. ಮುಂಜಾನೆಯಲ್ಲಿ ಅರಳುವ ತಾವರೆ ಹೂವಿನಂತೆ ನಿನ್ನ ಮುಖವಿದೆ; ನಿನ್ನ ಪ್ರೀತಿ ಮಾತ್ರ ಕೇಳುವೆ ನಾನು. ನನ್ನನ್ನು ತಿರಸ್ಕರಿಸದಿರು ನನ್ನ ಮನಸ್ಸಿನ ರಾಣಿ" ಎಂದು ವರ್ಣಿಸಿದ್ದಾರೆ.

ಇಲ್ಲಿ ಅಂದು ತಾನು ಮೆಚ್ಚಿದ ಹೆಣ್ಣಿಗೆ ಬದುಕಿನ ಬಗ್ಗೆ ಭರವಸೆಯನ್ನು ಕವಿ ನೀಡುತ್ತಿದ್ದಾನೆ. ಇಂದು ಗಂಡಿನ ಆಸರೆಯ ಅವಶ್ಯಕತೆ ಕಾಣದಿರುವ ಇಂದಿನ ಸ್ತ್ರೀ ಜಗತ್ತಿನಲ್ಲಿ ರೈತ ವರನಿಗೆ ವಧು ಸಿಗದಿರುವ ವರ್ತಮಾನದಲ್ಲಿ "ಪ್ರೀತಿಯೊಂದನೆ ನಿನ್ನ ಕೇಳುವುದು ನಾನು, ಮುಂದೆ ಹೋಗೆನ್ನದಿರು ನನ್ನ ಮನದರಸಿ" ಎಂಬ ನುಡಿಗಳು ಪ್ರೇಮಿಯ ಪ್ರಲಾಪದಂತೆ, ಪ್ರೇಮಭಿಕ್ಷೆಯನ್ನು ಬೇಡುವಂತೆ ಭಾಸವಾಗುತ್ತದೆ.(ಹಳ್ಳಿಯ ಚೆಲುವೆಗೆ–ಪು.19)

**ಶಾನುಭೋಗರ ಮಗಳು**

ಶಾನುಭೋಗರ ಮಗಳು ತಾಯಿಯಿಲ್ಲದ ಹೆಣ್ಣು ಊರಿಗೆಲ್ಲಾ ಒಬ್ಬಳೇ ಸೌಂದರ್ಯವತಿ. ತುಂಬಾ ಬುದ್ಧಿವಂತಿಕೆ ಗಾಂಭೀರ್ಯದಿಂದ ಇರುವಳು. ಇವಳ ಹೆಸರು ಸೀತಾದೇವಿ ಹನ್ನೆರಡು ವರ್ಷವಾಗಿದ್ದರೂ ಮದುವೆಯಾಗಿಲ್ಲ.

ಕಣ್ಣು ಮಿಂಚಿನಂತಿದೆ, ತಾಯಿ ಇಲ್ಲ. ತಾಯಿಯನ್ನು ನೆನೆದು ಅವಳ ಕಣ್ಣು ಒಮ್ಮೊಮ್ಮೆ ಕಣ್ಣೀರ ಕೊಳವಾಗಿದೆ. ತಾಯಿಯ ರೂಪದ ಒಲವು ಬರುವುದೆಂದು, ತನ್ನ ಬಾಳು ತಂಪಾಗುವುದೆಂದು ಎಂದು ಕನಸು ಕಾಣುತ್ತಾ ಸಮಾಧಾನ ಮಾಡಿಕೊಳ್ಳುತ್ತಾಳೆ. ಸೀತಾದೇವಿಯು ಊರ ಸಮೀಪದ ಕೆರೆಯಿಂದ ನೀರನ್ನು ತರುವಾಗ ಬಹು ಸುಂದರವಾಗಿ ಕಾಣುತ್ತಾಳೆ. ಸೀತಾದೇವಿಯನ್ನು ನೋಡಲು ತಾವರೆಗೆರೆಯ ಜೋಯಿಸರ ಮೊಮ್ಮಗನು ಅವರ ಮನೆಗೆ ಬಂದಿರುತ್ತಾನೆ. ಆ ಗಂಡನ್ನ ನೋಡಿದ ಸೀತೆ ಅವನನ್ನು ತಿರಸ್ಕರಿಸಿದಳು. ಶಾನುಭೋಗ ಮಗಳ ಮಾತನ್ನು ಕೇಳಿ ನಕ್ಕುಬಿಟ್ಟರು. ಸೀತಾಳಿಗೆ ಮದುವೆ ಇಷ್ಟವಿಲ್ಲ ಎಂದು ಹೇಳಿದರು. ಹಲ್ಲಿ ಶುಭನುಡಿಯನ್ನು ನುಡಿಯಿತು. ಮುಂದೆ ನಾನೇನು ಹೇಳಲಿ ಎಂದರು ಶಾನುಭೋಗರು. ಜೋಯಿಸನು ಮನೆಗೆ ತೆರಳಿದನು.

ಬೆಳಗ್ಗೆ ಕೆರೆಯ ಬಳಿ ಸೀತಾ ಕವಿಯ ತಂಗಿಗೆ ತನ್ನನ್ನು ನೋಡಲು ಬಂದಿದ್ದ ಗಂಡು ತುಂಬಾ ಕಪ್ಪಾಗಿದ್ದ ವಿಚಾರ ಹೇಳಿದಳು. "ನಮ್ಮೂರಿನ ಅಕ್ಕರೆಯ ಸಕ್ಕರೆಯ ಬೊಂಬೆ, ಅವಳನ್ನು ನೋಡಲು ಕಪ್ಪು ಹುಡುಗ ಬರಬಹುದೆ?" ಎಂದು ಕವಿ ಪ್ರಶ್ನಿಸುತ್ತಾರೆ. ಶಾನುಭೋಗರ ಮನೆಗೆ ಗಂಡು ನೋಡಲು ಹೋದರೆ ಯಾವುದೇ ಉಪಯೋಗವಾಗುವುದಿಲ್ಲ ಎನ್ನುತ್ತಾರೆ.

"ಚಿನ್ನದಂತ ಹುಡುಗಿಯಾದ ಸೀತಾದೇವಿಗೆ ಗಂಡು ಸಿಕ್ಕೇಸಿಗುತ್ತದೆ. ವಿವಾಹ ತಡವಾದರೂ ಪರವಾಗಿಲ್ಲ ಸರಿಯಾದ ಗಂಡು ಸಿಕ್ಕಿ ಅವರು ಸುಖವಾಗಿರಲಿ" ಎಂದು ಇಲ್ಲಿ ವರ್ಣಸೂಕ್ಷ್ಮವಿಚಾರವಿದ್ದರೂ, ಗಂಡಿನ ಆಯ್ಕೆಯಲ್ಲಿರಬೇಕಾದ ಹೆಣ್ಣಿನ ಸ್ವಾತಂತ್ರ್ಯ, ಅಂತರಾಳವನ್ನು ಕವಿ ನಿರೂಪಕನ ಮೂಲಕ ಕಂಡರಿಸುತ್ತಾರೆ.(ಶಾನುಭೋಗರ ಮಗಳು–ಪು.52)

ಸ್ವಪ್ನ ಸುಂದರಿ :"ಇರುಳೆಂಬ ಕತ್ತಲೆಯ ಕಡಲು ತುಂಬಿದ ಮೇಲೆ ಚಂದಿರನ ಹರಿಗೋಲ ಮೀಟಿ ಬರುವ" ಸ್ವಪ್ನಸುಂದರಿಯು ಕೋಟಿ ಕನಸುಗಳ ಮೂಲಕ ಜಗತ್ತನ್ನು ಆಳುತ್ತಿದ್ದಾಳೆ. ದೇವಾಲಯದಲ್ಲಿ ಮಲಗಿರುವ ಭಿಕ್ಷುಕನ ಕಣ್ಣಮುಂದೆ ಚಿನ್ನ ಸುರಿದು ಬರುವಳು. ಚೆಲ್ಲಿ ಸೂಸುವ ಬೆಳದಿಂಗಳ ಸಿರಿಯಲ್ಲಿ ಮಲಗಿರುವ ಇಳೆಯಾಣ್ಮನಿಗೆ ಸರ್ಪದರ್ಶನದ ಕುಣಿತವನ್ನು ತೋರಿ ಬರುವ ಅವಳು ಕಳೆದುಕೊಂಡ ಪ್ರೇಯಸಿಯನ್ನು ನೆನೆಯುತ್ತಾ ದುಃಖದಲ್ಲಿ ಮರೆತ ತರುಣನಿಗೆ ಹೂ ಮುತ್ತನ್ನು ಸುರಿಸುತ್ತಾ ಬರುವಳು. ತುಂಬು ಬಸುರಿಯ ಹಾಲು ಕುಡಿಯುವ ಕಂದನನ್ನು ಜೋಗುಳದಲ್ಲಿ ತೂಗಿ ಹಾಡುತ್ತಾ ಮಲಗಿಸುವಳು. ಸೂರ್ಯೋದಯವಾಗುತ್ತಿದ್ದಂತೆ ಓಡುವಳು ಚೆಲುವೆ. ಹಗಲಿನಲ್ಲಿ

ರವಿ ಬಂದರೆ ಓಡುವ ಚೆಲುವೆ ಕವಿಗೆ ಅಚ್ಚರಿಯಾಗಿದ್ದಾಳೆ. ಹಗಲಲ್ಲಿ ಮೌನದಿಂದ ಮಲಗಿರುವುದು ಅವಳ ವೀಣೆ. ಜಗದ ಜೀವನ ಯಂತ್ರ ನಡೆಯುತ್ತಿದೆ. ಎಂದಿನ ಹಾಗೆ ಅವಳ ಆಟ–ಪಾಠಗಳು ಮಳೆಬಿಲ್ಲ ಬೇಟದಂತೆ ಇದೆ. ಎಂದು ಕವಿ ವರ್ಣಿಸುತ್ತಾನೆ. ಇಲ್ಲಿ ಸ್ವಪ್ನದ ಕ್ಷಣಿಕತೆ ವ್ಯಕ್ತವಾಗಿದೆ. ಜೊತೆಗೆ ಅಲ್ಲಿಯೂ ಕವಿ ಸಂತೋಷವನ್ನು ಅರಸುತ್ತಿರುವುದು ಕಂಡುಬರುತ್ತದೆ.( ಪು.70)

**ನಿನ್ನ ಹೆಸರು:**

ಹೆಣ್ಣು ಗಂಡಿನ ನಡುವಿನ ಸಾಮರಸ್ಯ ಜೀವನ, ಹೊಂದಾಣಿಕೆ, ಎಲ್ಲವೂ ಈ ಕವನದಲ್ಲಿ ಅಡಗಿದೆ. ಗಂಡು ತನ್ನ ಪ್ರೀತಿಯ ಹುಡುಗಿಯ ಹೆಸರನ್ನು ಕಡಲ ತೀರದಲ್ಲಿ ಮರಳಿನಲ್ಲಿ ಬರೆದಿರುವುದನ್ನು ಹಾಗೇ ಕಲ್ಲಿನಲ್ಲಿ ಅವಳ ಹೆಸರನ್ನು ಕೊರೆದಿರುವುದನ್ನು ನೆನೆದು ಇದು ಮುಂದಿನ ಪ್ರೇಮಿಗಳಿಗೆ ಸ್ಫೂರ್ತಿಯಾಗಲಿ ನಿನ್ನ ಹೆಸರು ಚಿರಕಾಲ ಶಾಶ್ವತವಾಗಿ ಉಳಿಯಲಿ ಎಂಬ ಮನೋಭಾವನೆಯನ್ನು ಕವಿ ಇಲ್ಲಿ ಹೊಂದಿದ್ದಾರೆ. ಪ್ರೇಯಸಿಯ ಮೇಲಿನ ಅತಿಯಾದ ಪ್ರೇಮ ಇಲ್ಲಿ ಸ್ಪಷ್ಟವಾಗಿ ಚಿತ್ರಿತಗೊಳ್ಳುವುದನ್ನು ನೋಡಬಹುದಾಗಿದೆ.

**ಪ್ರೇಮದ ಗುಲಾಬಿ:**

ಪ್ರಿಯತಮ ತನ್ನ ಪ್ರೇಯಸಿಯನ್ನು ಗುಲಾಬಿ ಹೂವಿಗೆ ಹೋಲಿಸುತ್ತಾ ಮುತ್ತನಿಡುವೆನು, ಅರಳು ಪ್ರೇಮದ ಗುಲಾಬಿ, ನನ್ನ ಮೇಲೆ ಪ್ರೀತಿಯನ್ನು ತೋರಿಸು ಎಷ್ಟೆ ಹೆಣ್ಣು ನನ್ನನ್ನು ನೋಡಿದರೆ ನನ್ನ ಮನಸ್ಸು ಆ ಕಡೆ ಹೋಗುವುದಿಲ್ಲ ನಿನ್ನನ್ನು ನನ್ನ ಮನಸ್ಸು ಒಪ್ಪಿಕೊಂಡಿದೆ. ಬೇರೆ ಹೆಣ್ಣಿಗಿಂತ ನೀನೆ ಬಲುಸೊಗಸು ನೀನೆ ಶ್ರೇಷ್ಠ. ರಸಿಕತೆಯ ರಮಣೀಯವಾಗಿ ನೀನಿಂತಿರಲು ಭೂಮಿಯಲ್ಲಿ ನಿನ್ನಂತ ಚೆಲುವೆ ಯಾರು ಇಲ್ಲ.

ನನ್ನಲ್ಲಿನ ದುಃಖವನ್ನು ನೀನು ಕಡಿಮೆ ಮಾಡಿದ್ದೀಯ ಸುಖವನ್ನೇ ನನಗೆ ನೀನು ನೀಡುತ್ತಿರುವೆ. ನಾನು ನಿನ್ನಿಲ್ಲಿ ಬೇಡುವುದು ನನ್ನ ಮನಸ್ಸು ನಿನ್ನಲ್ಲೆ ಕೂಡಿಕೊಳ್ಳಲಿ. ನನ್ನ ಮನಸ್ಸಿನಲ್ಲಿ ನಿನ್ನ ಮೌನವೇ ಆವರಿಸಿಕೊಂಡಿದೆ. ನಿನ್ನ ಮೌನದ ಮುಂದೆ ಗಾನದ (ಹಾಡಿನ) ಇಂಪು ಗೆಲ್ಲಬಹುದೆ? ಕನಸಿನಲ್ಲಿ ಮನಸ್ಸನ್ನ ಆಳುವ ದಿವ್ಯತೆಯ ಮುಂದೆ ಅನುಭವದ ಅರೆ ಸಂಪತ್ತು ನಿಲ್ಲುವುದಿಲ್ಲ.

ಸಂಜೆಯ ವೇಳೆ ನನ್ನ ಅರಸಿಗೆ ಮುತ್ತನಿಡುವೆನು ಕಡೆಯ ಮುತ್ತು ಹಿಮದಿಂದ ಕೂಡಿದೆ ಆಹ, ಪಾಪದ ಮುತ್ತು/ ನೆನೆಯ ಬಾರದ ಮುತ್ತು /ಎಲ್ಲ ಒಂದರಗಳಿಗೆ ಮತ್ತೆ ಚೆಲುವು. ಒಂದು ಹೂವು ಅರಳಿ ಉದುರುವುದು, ಮತ್ತೊಂದು ಮೊಗ್ಗಾಗಿ ಅರಳುತ್ತದೆ. ಚೆಲುವು ಬೀರುವುದೇ ಹೂವು. ಚೆಲುವಿಗೆ(ಸೌಂದರ್ಯ) ಆದಿ–ಅಂತ್ಯಗಳಿಲ್ಲ. ಚೆಲುವೆ ಬದುಕಿನ ಬೆಳಕು. ಪ್ರೇಮಲಹರಿ ಎಂದಿದ್ದಾರೆ. ನೀನು ಇಲ್ಲದೆ ಈ ಭೂಮಿಯಲ್ಲಿ ನಾನು ಇರಲಾರೆ ನಿನ್ನಿಂದ ನನ್ನಲ್ಲಿರುವ ದುಃಖ ಹಗುರವಾಯಿತು. ಹೂವಿಗಿಂತಲು ಬದುಕು ಹಗುರ, ಸೊಗಸಾದುದು ಎಂಬುದು ಕವಿಯ ಭಾವವಾಗಿದೆ.

**ದಾಂಪತ್ಯ ಪ್ರೇಮ ಕವನಗಳು**

ಗೃಹಲಕ್ಷ್ಮಿ, ಬಾರೆ ನನ್ನ ಶಾರದೆ, ತಿಂಗಳಾಯಿತೆ, ನಕ್ಕು ನಗಿಸು, ಮಾವನ ಮನೆಯಲ್ಲಿ, ಸೀತೆಯ ಪುಣ್ಯ, ಸಂಗಮ, ಸಂಜೆಯಾಗುವುದೆಂದಿಗೆ, ಒಸಗೆಯಾಯಿತು, ಹೆಂಡತಿಯ ಕಾಗದ, ಪ್ರಶ್ನೆಗೆ ಉತ್ತರ ಮುಂತಾದವು ದಾಂಪತ್ಯಪ್ರೇಮದ ಕವನಗಳಾಗಿವೆ. ಇವುಗಳಲ್ಲದೆ ತಂಗಿಯ ಮಾತು, ಸೀತೆಯ ಪುಣ್ಯ ಮುಂತಾದವು ಪುತ್ರಪ್ರೇಮವನ್ನು ಚಿತ್ರಿಸುತ್ತವೆ. ಕೆರೆಯ ದಾರಿಯಲಿ, ಇರುಳ ದೀಪ ಮುಂತಾದವು ದಾಂಪತ್ಯ ವಿರಹದ ವಿಚಾರಗಳನ್ನು ವರ್ಣಿಸುತ್ತದೆ. ದೇವರ ಬಗ್ಗೆ, ಪ್ರಕೃತಿಯ ಬಗ್ಗೆ, ಸಮಯದ ಬಗ್ಗೆ ಇರುವ ಕವಿ ಕಲ್ಪನೆಗಳನ್ನು ಇತರ ಕವನಗಳ ಗುಂಪಿನಲ್ಲಿ ಗುರುತಿಸಬಹುದು. ಕೆಲವು ಕವನಗಳನ್ನು ಪರಾಮರ್ಶಿಸಬಹುದು.

**ಗೃಹಲಕ್ಷ್ಮಿ**

ನವದಂಪತಿಗಳ ಸುಂದರ ಜೀವನದ ಮಾದರಿಯನ್ನು ಈ ಕವಿತೆ ನಿರೂಪಿಸುತ್ತದೆ. ಕವಿಯ ಕನಸುಗಾರಿಕೆ, ಕಲ್ಪನಾರಮ್ಯತೆ, ಭಾವಕೋಮಲತೆ, ವರ್ಣನಕೌಶಲ. ಚಿತ್ರ ಶಕ್ತಿ, ಇವೆಲ್ಲವನ್ನೂ ಈ ಕವನದಲ್ಲಿ ತಿಳಿಯಬಹುದು. ಸಂಸಾರದ 'ಸೊಗಸುಗಾರಿಕೆ'ಗೆ ಇಡೀ ಪದ್ಯವನ್ನು ಉದಾಹರಿಸಬಹುದು. ತನ್ನ ಹೃದಯ ಗೆದ್ದಾಕೆಯನ್ನು ಕವಿ ಚಿತ್ರಿಸಿದ್ದಾನೆ. ವರ್ಣನೆ ಪಾರಂಪರಿಕ ವರ್ಣನೆಗಿಂತ ಭಿನ್ನವಾದುದು. ನನ್ನವಳು ನನ್ನ ಈ ಹೃದಯವನ್ನು ಆಳುವವಳು ಎಂಬುದರಲ್ಲಿ ಹೆಂಡತಿಗಿರುವ ಪ್ರಾಮುಖ್ಯತೆ ತಿಳಿದುಬರುತ್ತದೆ. ಅವಳ ಕಣ್ಣಿನ ಚೆಲುವು ಹೊಳೆಯ ಸುಳಿಗಿಂತ ಆಳವಾದುದು. ಬೆನ್ನ ಮೇಲೆ ಹರಡಿದ ಕಪ್ಪು ಕುರುಳಿನ ಚಿತ್ರ ದೂರಾದ ಗಿರಿಯ ಮೇಲೆ ಇಳಿದ ಇರುಳಿನಂತೆ ಕಂಡುದು ಅದ್ಭುತ ಕಲ್ಪನೆಯೇ ಆಗಿದೆ. 'ಬಂಗಾರದ ಹುಡುಗಿ' ನನ್ನ ಮಡದಿ ಎಂದಿದ್ದಾರೆ.

ನನ್ನ ಮನೆಗೆ ಅವಳೇ 'ಲಕ್ಷ್ಮಿ' ನಮಗೇ ನೋವು ಸಾವುಗಳಿಲ್ಲ, ಒಲುಮೆಯೇ ನಮಗೆ ಜೀವನ. ಎಂಬ ಅಭಿಪ್ರಾಯ ಕವಿಯಲ್ಲಿ ಮೂಡಿಬರುವುದನ್ನು ಸೂಕ್ಷ್ಮವಾಗಿ ಗ್ರಹಿಸಬಹುದಾಗಿದೆ.

**ಬಾರೆ ನನ್ನ ಶಾರದೆ:** ಗಂಡ ಹೆಂಡತಿಯರ ಅನ್ಯೋನ್ಯ ದಾಂಪತ್ಯ ಚಿತ್ರಣ ಈ ಕವನದಲ್ಲಿದೆ. "ಮದುವೆಯಾಗಿ ತಿಂಗಳಿಲ್ಲ.

ನೋಡಿರಣ್ಣ ಹೇಗಿದೆ .

ನಾನು ಕೂಗಿದಾಗಲೆಲ್ಲ ಬರುವಳೆನ್ನ ಶಾರದೆ"

ಎಂಬ ಸಾಲುಗಳು ದಾಂಪತ್ಯದ ಆರಂಭದ ಪರಿಸರವನ್ನು ಈ ಮಾತುಗಳು ಬಿಂಬಿಸುತ್ತವೆ. ಮದುವೆಯ ನಂತರದ ಆರಂಭ ದಿನಗಳಲ್ಲಿ ಗಂಡ ಹೆಂಡತಿಯ ಹೊಂದಾಣಿಕೆ ಜೀವನ ಇಲ್ಲಿ ಅಭಿವ್ಯಕ್ತಗೊಂಡಿದೆ. ಯಾರು ನೋಡಿದರು ನಾನು ನಿನ್ನೊಂದಿಗೆಯೇ ಇರುವೆ, ಹಾಗೇ ಸಾವಿನ ನೆಳಲು ಸದಾ ಹಿಂಬಾಲಿಸುವುದರಿಂದ ಬದುಕು ಶಾಶ್ವತವಲ್ಲವಾದರೂ ಅದನ್ನು ಸವಿಯಬೇಕೆಂದು ಕವಿತೆ ಕರೆಕೊಡುತ್ತದೆ. ಸಂಸಾರದಲ್ಲಿ ಸುಖ, ಸವಿ, ಹೊಂದಾಣಿಕೆ, ಸಾಮರಸ್ಯ ಇರಲಿ ಎನ್ನುವುದು ಕವನದ ಸಂದೇಶವಾಗಿದೆ. ಮದುವೆಗೆ ಮುಂಚೆಯೇ ಕಾಮಾತುರರಾಗಿ ಹೆಣ್ಣು-ಗಂಡುಗಳು ಒಂದಾಗುವ ಭಾವನಾರಹಿತರಾಗುವ ಇಂದಿನ ದಿನಮಾನದಲ್ಲಿ ಈ ಕವಿತೆ ದಾಂಪತ್ಯದ ಕಾಯುವಿಕೆ-ಹೆಣ್ಣು ಗಂಡುಗಳ ನಡುವಿನ ಲಜ್ಜೆ ಎಲ್ಲವನ್ನೂ ಕಟ್ಟಿಕೊಡುತ್ತದೆ.

**ತಿಂಗಳಾಯಿತೆ :** ಗಂಡ ಹೆಂಡತಿಯರ ದಾಂಪತ್ಯ ಜೀವನಕ್ಕೆ ಒಂದು ಹೊಸ ನೆಲೆಗಟ್ಟನ್ನೇ ಈ ಕವನ ನೀಡಿದೆ. ಗಂಡನು ತಾನು ಯಾವುದೋ ಕೆಲಸದ ನಿಮಿತ್ತ ಹೊರಗಡೆ ಹೋಗುವಾಗ ಪ್ರೀತಿಯ ಮಡದಿ "ಇನ್ನೆಂದು ಬರುವಿರಿ" ಎಂದಾಗ "ಇನ್ನೊಂದು ತಿಂಗಳಿಗೆ" ಎನ್ನುತ್ತಾನೆ ಗಂಡ. ಇದರಿಂದ ಕೋಪಗೊಂಡ ಹೆಂಡತಿಯ ಕೆನ್ನೆ ಕೆಂಪಾಗಿದೆ. ಅದನ್ನು ಕವಿ ಸಂಜೆ ಮುಗಿಲಿಗೆ ಹೋಲಿಸಿದ್ದಾನೆ. ಕಣ್ಣನ್ನು ತಿಳಿಬಾನ ಕಿರುತಾರೆಗೆ ಹೋಲಿಸಿ ಅವಳ ಮನಸ್ಥಿತಿಯನ್ನು ಇಲ್ಲಿ ಸ್ಪಷ್ಟವಾಗಿ ನಿರೂಪಿಸಿದ್ದಾನೆ. ಹೆಂಡತಿಯ ಪ್ರೀತಿಯ ನೆನಪಲ್ಲೇ ಗಂಡ ನಿಲ್ದಾಣದೆಡೆ ತೆರಳುವಾಗ ದಾರಿಹೋಕ ಒಬ್ಬ "ಹೊರಟು ಹೋದುದು ಬಂಡಿ" ಎನ್ನುತ್ತಾನೆ. ಬಂದ ದಾರಿಗೆ ಸುಂಕವಿಲ್ಲದಂತೆ ಗಂಡನು ಮನೆಗೆ ಬಂದಾಗ ಹೆಂಡತಿ 'ತಿಂಗಳಾಯಿತೆ' ಎಂದು ಕೇಳಿದಳು. ಈ ಕವನ ಗಂಡ ಹೆಂಡತಿಯರ ಸರಸದ ಒಲುಮೆಯನ್ನು ಸ್ವಾರಸ್ಯಕರವಾಗಿ ಚಿತ್ರಿಸುತ್ತದೆ. ಎನ್ನಬಹುದಾಗಿದೆ.

**ಗೆ :** ಗಂಡನು ತನ್ನ ಪ್ರೀತಿಯ ಹೆಂಡತಿ ಕುರಿತಂತೆ ಬರೆದ ಕವನ ಇದಾಗಿದೆ. "ನಿನ್ನ ಪ್ರೇಮದ ರೀತಿ ನೀತಿಯನ್ನು ನಾ ಅರಿಯಲಾರೆ. ನಿನ್ನೊಳಗೇ ನನ್ನ ಮನಸು ಅಡಗಿದೆ. ಹುಣ್ಣಿಮೆ ರಾತ್ರಿಯಲಿ ನಿನ್ನ ಕಂಡಾಗ ನಿನ್ನೊಲುಮೆ ಉಕ್ಕಿ ಬರುತ್ತದೆ" ಎಂದು, ಅವಳ ನೆನಪುಗಳು ಅಲೆಗಳು ತೀರದಲಿ ಕಣ್ಣ ಚುಂಬಿಸಿ ಹೋಗಿ ಮತ್ತೆ ಬಂದಂತೆ ಹಾಗೂ, ಕನಸಿನಂತೆ ಸಾಗುವುದು ಎಂದು ಅವಳ ಭ್ರಮೆಯಲ್ಲಿ ನಾಯಕ ತೇಲಾಡುತ್ತಿದ್ದಾನೆ. ನಿನ್ನ 'ಒಲುಮೆ' ಎಂಬ ಅರಮನೆಗೆ ಅಲೆ ಬಂದು ಕರೆಯುತ್ತಿದೆ. ಅಲೆಯಿಡುವಂತಹ ಮುತ್ತಿನಲೆ ನಿನ್ನೊಲುಮೆಯನ್ನು, ಕಾಣುತ್ತೇನ ಎಂಬುದಾಗಿ ಹೆಂಡತಿಯನ್ನು 'ಅರ್ಧಾಂಗಿ' ಎಂದು ಸಂಭೋದಿಸಿರುವುದನ್ನು ಇಲ್ಲಿ ಕಾಣಬಹುದಾಗಿದೆ. ಈ ಕವನ ಚಿತ್ರಗೀತೆಯಾಗಿಯೂ ಪ್ರಸಿದ್ಧಿಯನ್ನೂ ಪಡೆದಿದೆ .

**ನಕ್ಕು ನಗಿಸು :** ಈ ಕವಿತೆ ನಗುವಿನೊಂದಿಗೆ ಆರಂಭಗೊಂಡು ಸುಂದರ ದಾಂಪತ್ಯ ಜೀವನವನ್ನು ಕಟ್ಟಿಕೊಡುತ್ತದೆ. ಹೆಂಡತಿಯನ್ನು "ನೀನು ನಗು ಜೊತೆಗೆ ನನ್ನನ್ನು ನಗಿಸು, ನಿನ್ನ ತಾನೆ ಕನಸು ಕೈಗೂಡಿದೆ ಹಾಗಾಗಿ ನಗಿಸು" ಎನ್ನುತ್ತಿದ್ದಾರೆ. ನಗುವನ್ನು ಪ್ರಕೃತಿಗೆ ಸಮೀಕರಿಸುವುದನ್ನು ನೋಡಬಹುದು. "ತಣ್ಣನೆ ಕಡಲಂತೆ, ಬಣ್ಣದ ಮುಗುಳಂತೆ, ಹುಣ್ಣಿಮೆಯ ಇರುಳಂತೆ, ನನ್ನೊಲುಮೆಯ ಹೆಣ್ಣೆ ನಗು" ಜೀವನದಲ್ಲಿ ಎಲ್ಲಾ ಕಷ್ಟವನ್ನು ನಗುವೆಂಬುದು ದೂರ ಮಾಡುತ್ತದೆ. ನಗುವಿಗೆ ಬೆಲೆಯಿದೆ. ಹಾಗಾಗಿ ಇಬ್ಬರೂ ಒಟ್ಟಿಗೆ ಸೇರಿ ಕನ್ನಡಿಯ ಮುಂದೆ ನಕ್ಕಿ ಬಿಡೋಣ, ನಗುವಿನಿಂದ ಜೀವನದ ಚಿಂತೆ ತೊಲಗಲಿ, ಎಂಬ ಬಯಕೆಯನ್ನು ಇಲ್ಲಿ ಕವಿ ಕಾಣುವುದನ್ನು ತಿಳಿಯಬಹುದಾಗಿದೆ. ದಾಂಪತ್ಯದಲ್ಲಿ ನಗುವಿನ ಮಹತ್ವವನ್ನು ಈ ಕವನ ತಿಳಿಸುತ್ತದೆ.

**ಹೆಂಡತಿಯ ಕಾಗದ :** ಹೆಂಡತಿ ತನ್ನ ಗಂಡನಿಗಾಗಿ ಬರೆದ ಪತ್ರದ ಭಾವನೆಗಳೇ ಈ ಕವನ. ತವರು ಮನೆಯಲ್ಲಿ ತನ್ನ ಗಂಡನ ನೆನಪಿನಲ್ಲಿ ಹೆಂಡತಿ ತನ್ನ ಭಾವನೆಗಳನ್ನೆಲ್ಲ ಕಾಗದದ ರೂಪದಲ್ಲಿ ಬರೆದಿರುವ ಸ್ವಾರಸ್ಯ ಇಲ್ಲಿದೆ. ತನ್ನ ತವರುಮನೆಯಲ್ಲಿ ಪ್ರತಿಕ್ಷಣವು ಗಂಡನ ನೆನಪಲ್ಲೇ ಹೆಂಡತಿ ಬದುಕುತ್ತಿದ್ದಾಳೆ. "ನಿಮ್ಮ ನೆನಪಿನಲ್ಲಿ ಹಗಲು ಇರುಳು ಕನಸು ಕಾಣುತ್ತಿದ್ದೇನೆ. ತಾಯಿಯ ಪ್ರೀತಿ ಇಲ್ಲಿದ್ದರು ನಿಮ್ಮದೇ ಸದಾ ನೆನಪು ಕಾಡುತ್ತಿದೆ. ಹಾಗೇ ನೀವಿಲ್ಲದೆ ಹೂಗಳೆಲ್ಲ ಹಾವಿನಂತೆ ಕಾಣಿಸುತ್ತಿದೆ. ನಾಳೆ ನಾನು ನಿಮಗಾಗಿ ಬರುವೆ, ನಮ್ಮ ತಂದೆಯವರೇ ಬಂದು ತಪ್ಪಾಯಿತೆನ್ನುವರು. ನನ್ನನ್ನು ಮರೆಯದೆ ನನ್ನ ಮೇಲೆ ಕೋಪ ಮಾಡಿಕೊಳ್ಳದೆ ಸುಮ್ಮನಿರಿ" ಎಂದು ವಿರಸವನ್ನು ಕಾಗದದ ಮೂಲಕ ಇಲ್ಲವಾಗಿಸುವ ಭಾವ ಈ ಕವನದಲ್ಲಿದೆ.

**ಪುತ್ರಪ್ರೇಮ ಕವನಗಳು**

**ರಾಮಬಂಟ :** ಚಿಕ್ಕ ಮಗುವಿನ ಆಟಗಳನ್ನು, ಮಗುವಿನ ಗುಣವನ್ನು ಈ ಕವಿತ ಕಟ್ಟುಕೊಡುತ್ತದೆ. ಮಗುವಿನ ನಡವಳಿಕೆ ಇಲ್ಲಿ ರೂಪಿತಗೊಂಡಿದೆ. ನಮ್ಮ ಮನೆಯೊಳಗೆ ಯಾವಾಗಲೂ ನಗುನಗುತ್ತಾ ಓಡಾಡುತ್ತಿರುತ್ತಾನೆ. ತುಂಬಾ ಜಾಣನವನು. ಮುದ್ದು ಕಳ್ಳನವನು. ನನ್ನನ್ನು ಕಂಡರೆ ಅವನಿಗೆ ತುಂಬಾ ಆಸೆ. ನಮ್ಮ ಬೀದಿಯಲ್ಲೇ ರತ್ನದಂಥ ಕಂದನು ಇವನು, ಮಗುವಿನ ವರ್ಣನೆ ಈ ಕವನದಲ್ಲಿದೆ. ಪುಟ್ಟ ಪುಟ್ಟ ಹೆಜ್ಜೆಯಿಟ್ಟು ಬೀದಿಯಲ್ಲೆಲ್ಲಾ ಬೆಳ್ಳಿ ಕಂದನಂತೆ ಇರುವನು. ಹಾಲಿನಂತ ಅವನ ಮನಸು, ಮುತ್ತಿನಂತ ಮಾತು. ದೇವರಂತೆ ಇರುವನು ಎಂಬುದಾಗಿ ಮಗುವಿನ ಮಾವ ಹೇಳುತ್ತಿದ್ದಾನೆ ತುಂಬಾ ತುಂಟ ರಾಮಬಂಟನು ನಗುನಗುತ್ತಾ ಇರುವನು. ಎಂದು ಮಗುವಿನ ಆಟವನ್ನೆಲ್ಲಾ ಈ ಕವನದಲ್ಲಿ ಸೊಗಸಾಗಿ ವರ್ಣಿಸಿದ್ದಾರೆ. ಪುತ್ರವಾತ್ಸಲ್ಯ ಇಲ್ಲಿ ಹೊರಹೊಮ್ಮಿದೆ ಎನ್ನಬಹುದು.

**ತೊಟ್ಟಿಲ ಹಾಡು :** ಈ ಕವನವು ಮಗುವನ್ನು ತೊಟ್ಟಿಲಲ್ಲಿ ಹಾಕಿ ತೂಗುವಾಗ ಹೇಳಿದಂತಹ ಹಾಡಾಗಿ ಹೊರಹೊಮ್ಮಿದೆ. ಇಲ್ಲಿ ಮಗುವನ್ನು ಮಲಗಿಸುವ ಸಂದರ್ಭದಲ್ಲಿ ತಾಯಿ ಆಡಿದಂತಹ ಮಾತುಗಳನ್ನು ನಾವು ತಿಳಿಯಬಹುದು. ಹಟ ಮಾಡದೆ ನಿದ್ದೆ

ಮಾಡು ಎಂಬುದಾಗಿ ಮಗುವನ್ನು ಕೇಳುತ್ತಿದ್ದಾಳೆ. ಮುದ್ದಿನ ಗಿಣಿಯೆ ಮಲಗು ಮುತ್ತಿನ ಮಣಿಯೆ ಮಲಗು ಎಂದು ಹೇಳುತ್ತಾ, ಜೋ ಜೋ ಎಂದು ತೊಟ್ಟಿಲು ತೂಗುವೆ ಮಲಗು ತುಂಟಮಗುವೆ. ಬೆಳಗಾದಾಗ ನಿನ್ನ ಬಳಿ ಬಂದು 'ಕಂದಾ' ಎನ್ನುವೆ ಸುಮ್ಮನೆ ಮಲಗು ಎಂದು ಮಗುವನ್ನು ನಿದ್ರಿಸಲು ತಾಯಿ ಪಡುವ ಯಾತನೆಗಳು ಹಾಗು ಮಗುವಿನ ಮೇಲಿನ ಅತಿಯಾದ ಪ್ರೀತಿ, ಈ ಕವನದಲ್ಲಿ ವ್ಯಕ್ತಗೊಂಡಿದೆ ಎನ್ನಬಹುದು.

### ವಿರಹ ಭಾವದ ಕವನಗಳು

#### ಕಾಮದಹನ

ಜೀವನದಲ್ಲಿ ವಿರಹದ ಬಗ್ಗೆ ತಿಳಿಯುವಾಗ ಈ ಕವನ ಮುಖ್ಯವೆನಿಸುತ್ತದೆ. ಮನುಷ್ಯನಿಗೆ ಹಸಿವು ಬಾಯಾರಿಕೆಯಾಗುವಂತೆ ಪ್ರೇಮದ ಬಾಯಾರಿಕೆಯು ಉಂಟಾಗುತ್ತದೆ ಪ್ರೇಮ ಸಾಮ್ರಾಜ್ಯದಲ್ಲಿ ಕಾಮದಹನವೇ ಮುಖ್ಯ ಎಲ್ಲರನ್ನು ಮನುಷ್ಯರನ್ನು ದೇವತೆಗಳನ್ನು ಈ ಕಾಮವೆಂಬುದು ಬಿಡಲಿಲ್ಲ. ಶಿವನು ರತಿಯನ್ನರಸಿ ದಹಿಸಿದನು ಕಾಮವನು. ರಾಮನನ್ನು ಕಾಮವೇ ಕೆರಳಿಸಿತು. ಹೀಗೆ ಲೋಕದಲಿ ಹೆಣ್ಣು ಗಂಡೆಲ್ಲ ಕಾಮನ ಬಳಗ ಅವನದೇ ಆಡಳಿತ ರಾಜ್ಯಗಳಲಿ, ಅಷ್ಟ ದಿಕ್ಪಾಲಕರಿಗೆ ಇಷ್ಟಮಿತ್ರನು ಕಾಮ. ದೇವತೆಗಳು ಕೈಬಿಟ್ಟಂತಹ ಕಾಮವನ್ನು ನರಮನುಷ್ಯರು ಬೇಡುತ್ತಿದ್ದಾರೆ. ಗಂಡನು ತನ್ನ ಹೆಂಡತಿಯನ್ನು ಕುರಿತು ಹೀಗೆ ಹೇಳಿದ್ದಾನೆ. ಚೆಂದುಟಿಯೆ ನಿನ್ನ ಮನೆ. ಮೆಲ್ನುಲಿಯೆ ನಿನ್ನ ದನಿ, ಎಂದು ಕಾಮವೆ.ಮೊದಲು ಬರಲಿ ಕೊನೆಗೆ ಪ್ರೇಮವ ತರಲಿ ಎಂದು ಕಾಮದ ಬಗ್ಗೆ ಕವಿ ತಿಳಿಸಿದ್ದಾರೆ.

#### ವಿರಹಿಣಿ

ಮನುಷ್ಯನ ಜೀವನದಲ್ಲಿ ವಿರಹಕ್ಕೆ ಪ್ರಮುಖ ಸ್ಥಾನ ಕೊಟ್ಟಿದ್ದಾನೆ. ಜೀವನದಲ್ಲಿ ದುಃಖಗಳು ಬರುವುದು ಸಾಮಾನ್ಯವಾಗಿದೆ. ಹುಡುಗ ಹೇಗೆ ವಿರಹ ಹೊಂದುತ್ತಾನೋ ಹಾಗೇ ಹೆಣ್ಣೊಬ್ಬಳು ಸಹ ವಿರಹವನ್ನು ಹೊಂದುವುದನ್ನು ಈ ಕವನದಲ್ಲಿ ತಿಳಿಯಬಹುದಾಗಿದೆ. ಗಂಡನನ್ನು ಬಯಸುತ್ತಾ ಹಗಲು ರಾತ್ರಿಯೆಲ್ಲಾ ಕೊರಗುವ ಅವಳ ದುಃಖವನ್ನು ಇಲ್ಲಿ ತಿಳಿಸುತ್ತಿದ್ದಾಳೆ. ನೀನಿಲ್ಲದ ಜೀವನ ನನಗೆ ಬೇಡವೆನಿಸಿದೆ ಎಂಬುದಾಗಿ ತನ್ನ ವಿರಹ ವೇದನೆಯನ್ನು ಈ ಕವನದಲ್ಲಿ ತಿಳಿಸುತ್ತಿದ್ದಾರೆ. ಹೆಣ್ಣಿನ ಮನದಾಳದ ತೊಳಲಾಟವನ್ನು ಇಲ್ಲಿ ನೋಡಬಹುದಾಗಿದೆ.

### ಇತರ ವಿಚಾರಗಳು

ತೌರ ಹಂಬಲ, ಬಳೆಗಾರನ ಹಾಡು, ನವಿಲಿಗೆ, ಏನ ಬೇಡಲಿ, ಕಾಲದ ಹೊಳೆ ಮುಂತಾದ ಕವನಗಳ ಕೇಂದ್ರ ಪ್ರೇಮವೇ ಆದರೂ ಭಾವನೆಗಳು ಭಿನ್ನವಾಗುತ್ತವೆ ಕೆಲವು ಕವನಗಳನ್ನು ಗಮನಿಸಬಹುದು.

#### ನವಿಲಿಗೆ

ಇಲ್ಲಿ ಕವಿ ನವಿಲನ್ನು ವರ್ಣಿಸುತ್ತಿದ್ದಾರೆ. ನಲಿಯುತ ಬಾ ನವಿಲೆ ಸಾವಿರ ಕಣ್ಣು ಗಳಿರುವ ನವಿಲೆ ಪಚ್ಚೆ ಗರಿಗಳ ಮಧ್ಯೆ ರತ್ನದ ಎಳೆಯಿಟ್ಟ ನೋಡುಗರಿಗೆ ಸಂತೋಷ ಉಂಟುಮಾಡುವ ನವಿಲೆ, ನವೀನ ಧ್ವನಿಯನ್ನು ಕೇಳಿದ್ದಾನೆ. ಹೂವಿನ ಬನದಲ್ಲಿ ಆಡು ಬಾ ನವಿಲೆ ಎಂದು ಹೇಳುತ್ತಿದ್ದಾನೆ. ಇಷ್ಟವಾದ ಬಣ್ಣದ ನವಿಲೆ ಎಂದು ಉತ್ಪ್ರೇಕ್ಷೆಯಿಂದ ನವಿಲನ್ನು ಕೊಂಡಾಡುತ್ತಿದ್ದಾನೆ. ಇಲ್ಲಿ ಮೇಲ್ನೋಟಕ್ಕೆ ನವಿಲು ಎಂದರ್ಥ ವಾದರೆ ಒಳನೋಟದಲ್ಲಿ ಕವಿತೆ ಮತ್ತು ಹೆಣ್ಣಿನ ಆಕರ್ಷಕ ವರ್ಣನೆಯಾಗಿದೆ.

#### ಏನ ಬೇಡಲಿ

ಇಲ್ಲಿ ಕವಿ ದೇವರ ಬಗ್ಗೆ ಸ್ಮರಿಸುತ್ತಿದ್ದಾರೆ. ದೇವರ ಮಾಯೆಗೆ ಕವಿ ಹೆದರಿ ಭಯಗೊಂಡಿದ್ದಾನೆ. ದೇವರ ಆಸೆಯಂತೆ ಬದುಕುತ್ತಾನೆ. ನನ್ನ ಬಗ್ಗೆ ನಾನು ತಿಳಿದುಕೊಂಡು ಮುಕ್ತಿ ಪಡೆಯುವುದೆ? ಸಾವಿಗೆ ಹೆದರಿ ನಿನ್ನ ಪಾದದ ಅಡಿಯಲ್ಲಿ ಅವಿತುಕೊಳ್ಳುವುದೆ? ಎಂದು ಕವಿ ಪ್ರಶ್ನಿಸುತ್ತಿದ್ದಾರೆ.

ಮುಕ್ತಿಯನ್ನು ಪಡೆಯಲು ಶಕ್ತಿಯ ಅವಶ್ಯಕತೆ ಇಲ್ಲ. ಬಳ್ಳಿಯನ್ನು ಬೆಳೆಸಲು ನೀರನ್ನು ಎರೆದಿರುವೆ. ಬದುಕಲು ಜ್ಞಾನವನ್ನು ನನಗೆ ನೀಡಿರುವೆ. ಹಾಡಲು ಒಳ್ಳೆಯ ಗಾನವನ್ನು ನೀಡಿರುವೆ. ಎಲ್ಲವನ್ನೂ ಕೊಟ್ಟಿರುವೆ ಜಗತ್ತನ್ನೇ ನನಗೆ ಬಿಟ್ಟಿರುವೆ ನಾನು ಏನು ಬೇಡಲಿ ? ದೇವ ನಿನ್ನನ್ನು ಏಕೆ ಕಾಡಲಿ ? ಎಂದು ದೇವರ ಮೇಲಿನ ಭಕ್ತಿಯನ್ನು ಕವಿ ವರ್ಣಿಸುತ್ತಿದ್ದಾರೆ.

#### ಕಾಲದ ಹೊಳೆ

ಇಲ್ಲಿನ ಕವನ ಪ್ರಕೃತಿಗೂ ಸಮಯಕ್ಕೂ ಇರುವ ಸಂಬಂಧವನ್ನು ಕಾಣುತ್ತದೆ. ಬೆಳಗಾಗಿ ಬಿಸಿಲು ಬಂದಾಗ ಹೂವು ಅರಳುವುದು, ಸಂಜೆಯಾಗಿ ಕತ್ತಲಾಗುವುದು ಚಂದ್ರನ ಉದಯವಾಗುವುದು, ಸಮಯ ಯಾರ ಅರಿವಿಗೋ, ಯಾರ ಅಳಿವಿಗೋ ಯಾರ ಒಲವಿಗೋ, ಯಾರ ಆಜ್ಞೆಗೂ ಹಾಡುವ ಪದವಲ್ಲ, ನೀರು ಕರಿಕಲ್ಲಿನ ಕಣಿವೆಯಲ್ಲಿ ಇಳಿಯುತಲಿದೆ ಕೆಳಗೆ ಇಳಿದ ಶುದ್ಧ ನೀರು ಮೇಲೇರುವುದಿಲ್ಲ ಎಂಬ ಪ್ರಶ್ನೆ ಎತ್ತಿ ಕವಿ ಸಮಯದ ಮಹತ್ವವನ್ನು ತಿಳಿಸುತ್ತಿದ್ದಾರೆ.

**ಕಲೆ**

ಕವಿ ಇಲ್ಲಿ ಪ್ರತಿಯೊಬ್ಬರ ಪ್ರತಿಭೆಯನ್ನು, ಅವರು ಅನುಭವಿಸುವ ನೋವನ್ನು ಚಿತ್ರಿಸುತ್ತಿದ್ದಾರೆ. ಚಿತ್ರಕಾರನು ಮನೆಯ ತುಂಬಾ ಪುಟ್ಟ ಮಕ್ಕಳ ಚಿತ್ರವನ್ನು ಬರೆದಿದ್ದಾನೆ ಅವನಿಗೆ ಮಕ್ಕಳಿಲ್ಲ, ಕವಿಯೋ ಪ್ರೇಮಗೀತೆ, ಪ್ರಕೃತಿ ಗೀತೆಯನ್ನು ಬರೆಯುತ್ತಿದ್ದಾನೆ ಅವನಿಗೆ ನೆಮ್ಮದಿ ಇಲ್ಲ ಪೂಜಾರಿಯು ದೇವರ ಸ್ತುತಿ ನಾರಾಯಣನ ನಾಮಸ್ಮರಣೆ ಮಾಡುತ್ತಾನೆ ಅವನಿಗೆ ಬಡತನ ಕಾಡುತ್ತದೆ. ಇಲ್ಲಿ ನೊಂದವರು ಬೆಂದವರು ಇಲ್ಲದವರಿಲ್ಲ. ಅವರೆಲ್ಲ ಬೇರೊಬ್ಬರ ಬುದುಕಿನ ಖುಷಿಗೆ ಕಾರಣರಾಗಿದ್ದಾರೆ. ಕಲೆ ಇವರ ಕೈ ಬಿಡುವುದಿಲ್ಲ ಕಲೆಗೆ ಇರುವ ಬೆಲೆ ಯಾವುದಕ್ಕೂ ದೊರಕುವುದಿಲ್ಲ ಎಂದು ಕವಿ ಕಲೆಯ ಬಗ್ಗೆ ವರ್ಣಿಸಿದ್ದಾರೆ.

ಕೆ.ಎಸ್.ನ ಅವರು ಪ್ರೇಮ ಕವನಗಳೊಂದಿಗೆ 'ಬಣ್ಣದ ಚಿಟ್ಟೆ' ಎಂಬ ಪ್ರಕೃತಿ ಕವನ ರಚಿಸಿದ್ದಾರೆ. ಹಾಗೇ 'ರಂಗನಾಥನ ಕಂಡು' ಎಂದು ರಂಗನಾಥಸ್ವಾಮಿಯನ್ನು ಕುರಿತು, ಕಾವ್ಯ ಮೀಮಾಂಸೆಯಾಗಿ 'ನನ್ನಕವಿತೆ' ಎಂಬ ಕವನಗಳನ್ನು ರಚಿಸಿದ್ದಾರೆ. ಪ್ರೇಮದೊಂದಿಗೆ ಪ್ರಕೃತಿಯ ಕಡೆ ಇವರ ಒಲವಿತ್ತು ಎಂಬುದಕ್ಕೆ ಈ ಕವನಗಳೇ  ಸಾಕ್ಷಿಯಾಗಿವೆ ಎನ್ನಬಹುದು.

**ಗ್ರಂಥಋಣ**

**ಅ) ಆಕರ ಕೃತಿ**

1. ಮೈಸೂರು ಮಲ್ಲಿಗೆ :  ಕೆ.ಎಸ್.ನರಸಿಂಹಸ್ವಾಮಿ, ಸ್ಟ್ಯಾಂಡರ್ಡ್ ಬುಕ್ ಕಂಪೆನಿ, ಬೆಂಗಳೂರು, 2003.

**ಆ) ಸಹಾಯಕ ಕೃತಿಗಳು**

1. ಕೆ.ಎಸ್. ನರಸಿಂಹಸ್ವಾಮಿ : ರಾಮೇಗೌಡ, ಪ್ರಧಾನ್ ಗುರುದತ್ತ (ಸಂ), ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು 2002
2. ಹೊಸ ಗನ್ನಡ ಸಾಹಿತ್ಯ ಚರಿತ್ರೆ : ಎಲ್.ಎಸ್. ಶೇಷಗಿರಿರಾವ್, ಕರ್ನಾಟಕ ಬುಕ್ ಎಜೆನ್ಸಿ, ಬೆಂಗಳೂರು,1975
3. ಮಲ್ಲಿಗೆಯ ಮಾಲೆ(ಸಮಗ್ರ ಕವನಗಳು): ಕೆ.ಎಸ್ ನರಸಿಂಹಸ್ವಾಮಿ, ಲಿಪಿ ಪ್ರಕಾಶನ, ಬೆಂಗಳೂರು,2004
4. ಸಾಲು ದೀಪಗಳು :ಮಾಲತಿ ಪಟ್ಟಣಶೆಟ್ಟಿ, ಜಿ.ಎಸ್.ಸಿದ್ದಲಿಂಗಯ್ಯ,ಎಂ.ಎಚ್.ಕೃಷ್ಣಯ್ಯ(ಸಂ), ಕರ್ನಾಟಕ ಸಾಹಿತ್ಯ ಅಕಾಡೆಮಿ, 1990.